ಅಸಲು ದಾವಾ ಸಂಖ್ಯೆ **244-2016** ಡಿ .ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **22.01.2026**

ಪಾಟೀ ಸವಾಲು ಃ ಶ್ರೀ ಜೆ.ಕೆ.ಆರ್ ನ್ಯಾಯಾವಾದಿಗಳಿಂದಃ

ದಾವಾ ಆಸ್ತಿಯನ್ನು ಖುದ್ದು ನೋಡಿರುತ್ತೇನೆ. ಈ ದಾವೆಯನ್ನು ವಾದಿಯು ಕಲ್ಲಿನಾಥಪುರ ಗ್ರಾಮ ಖಾತಾ ನಂಬರು 76/78 ಕ್ಕೆ ಸಲ್ಲಿಸಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರು 17/2 ಆಗಿತ್ತು. ಸರ್ವೆ ನಂಬರು 17/2 ರ ಉತ್ತರಕ್ಕೆ ಇರುವ ಸ್ವತ್ತು ಗ್ರಾಮಾಠಾಣಾ ಸ್ವತ್ತು ಆಗಿರುತ್ತದೆ. ಸದರಿ ಗ್ರಾಮಠಾಣಾ ಇರುವ ಬಗ್ಗೆ ನಮ್ಮ ಕಛೇರಿಯಲ್ಲಿ ದಾಖಾಲಾತಿಯು ಲಭ್ಯ ಇರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ವಾದಿಯ ಸ್ವತ್ತಿಗೆ ಸಂಬಂಧಿಸಿದ ಅಸೆಸ್ ಮೆಂಟ್ ದಾಖಲೆಯಲ್ಲಿ ನಮೂದು ಇರುವ ಚೆಕ್ಕು ಬಂದಿಯಲ್ಲಿ ಗ್ರಾಮಠಾಣಾ ಇರುವ ಬಗ್ಗೆ ನಮೂದು ಇರುವುದನ್ನು ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ.

2. ಕಲ್ಲಿನಾಥಪುರ ಗ್ರಾಮ ದಾಖಲೆ ಗ್ರಾಮವಾಗಿರುತ್ತದೆ. ಕಲ್ಲಿನಾಥಪುರದ ಇಡಿ ಗ್ರಾಮವು ಸರ್ವೆ ನಂಬರಿನ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ಕಂದಾಯ ಗ್ರಾಮ ಎಂದರೆ ಕರ್ನಾಟಕ ಸರ್ಕಾರವು ತನ್ನ ಅಧೀಕೃತ ಜ್ಞಾಪನದ ಮುಖಾಂತರ ಒಂದು ಊರನ್ನು ಕಂದಾಯ ಗ್ರಾಮ ಎಂದು ಗ್ರಾಮ ನಕಾಶೆಯಲ್ಲಿ ತೋರಿಸಿದರೆ ಮಾತ್ರ ಅದನ್ನು ಕಂದಾಯ ಗ್ರಾಮ ಎಂದು ಕರೆಯಲಾಗುತ್ತದೆ ಎಂದರೆ ಸರಿ.

3. ಕಂದಾಯ ಗ್ರಾಮಗಳು ಗ್ರಾಮಾಪಂಚಾಯಿತಿಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂದರೆ ಸರಿ. ಕೃಷಿ ಭೂಮಿಗಳು ಕೃಷಿಯೇತರ ಉದ್ದೇಶಕ್ಕಾಗಿ ಮಾರ್ಪಡುಗೊಂಡರೆ ಅದು ಪಂಚಾಯಿತಿ ಅಧಿಕಾರ ವ್ಯಾಪ್ತಿಗೆ ಒಳಪಡುತ್ತದೆ ಎಂದರೆ ಸರಿ. ಈ ತೋರಿಸಿದ ಕರಡಹಳ್ಳಿ ಗ್ರಾಮ ನಕಾಶೆಯಲ್ಲಿ ಕರಡಹಳ್ಳಿ ಗ್ರಾಮದ ಊರನ್ನು ಗುರುತಿಸಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಕರಡಹಳ್ಳಿ

ಗ್ರಾಮದ ಗ್ರಾಮ ನಕಾಶೆಯ ದೃಢೀಕೃತ ಪ್ರತಿಯಾಗಿದೆ ಅದನ್ನು ನಿಪಿ 8 ಎಂದು ಗುರುತಿಸಲಾಯಿತು.

4. ಕಂದಾಯ ಗ್ರಾಮವನ್ನು ಹೊರತು ಪಡಿಸಿ ಸರ್ವೆ ಜಮೀನುಗಳು ಸರ್ಕಾರದಿಂದ ಅಧಿಕೃತವಾಗಿ ಅನ್ಯಕ್ರಾಂತಗೊಂಡಾಗ ಮಾತ್ರ ಪಂಚಾಯಿತಿ ಅಧಿಕಾರ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ.

5. ದಾವಾ ಎ ಷೆಡ್ಯೂಲ್ ಸ್ವತ್ತು ಅನ್ಯಕ್ರಾಂತದ ಮುಖಾಂತರ ನಮ್ಮ ಪಂಚಾಯಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ನಿಪಿ.3 ಮತ್ತು 4 ರ ದಾಖಲೆಗಳನ್ನು ನಮ್ಮ ಪಂಚಾಯಿತಿಯಿಂದ ದಾವಾ ಎ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನೀಡಿರುವ ದಾಖಲೆಗಳು ಆಗಿರುತ್ತವೆ ಎಂದರೆ ಸರಿ. ಸದರಿ ದಾಖಲೆಗಳಲ್ಲಿ ದಾವಾ ಎ ಷೆಡ್ಯೂಲ್ ಸ್ವತ್ತಿನ ಉತ್ತರಕ್ಕೆ ಗ್ರಾಮಾಠಾಣಾ ಬ್ರಾಕೇಟ್ ಒಳಗೆ ರಸ್ತೆ ಎಂದು ನಮೂದು ಇರುತ್ತದೆ. ವಾಸ್ತವವಾಗಿ ಸ್ಥಳದಲ್ಲಿ ಗ್ರಾಮಠಾಣಾ ನಂತರದಲ್ಲಿ ರಸ್ತೆ ಇರುತ್ತದೆ, ಆ ಪ್ರಕಾರ ನಿಪಿ.3 ಮತ್ತು 4 ರಲ್ಲಿ ಗ್ರಾಮಠಾಣಾ ಬ್ರಾಕೇಟ್ ಒಳಗೆ ರಸ್ತೆ ಎಂದು ನಮೂದಿಸಿರುವುದು ತಪ್ಪಾಗಿರುತ್ತದೆ. ನಿಪಿ.4 ರ ದಾಖಲೆಯ ಆಧಾರದ ಮೇಲೆ ನಿಪಿ.3 ಅನ್ನು ಬರೆಯಲಾಗುತ್ತದೆ. ನಿಪಿ.4 ಮೂಲ ದಾಖಲೆಯಾಗಿರುತ್ತದೆ.

6. ನಿಪಿ.4 ರಲ್ಲಿ ದಾವಾ ಎ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಉತ್ತರಕ್ಕೆ ರಸ್ತೆ ಗ್ರಾಮಾಠಾಣಾ ಎಂದು ನಮೂದಿಸಿ ನಂತರ ಸದರಿ ರಸ್ತೆಯನ್ನು ಹೊಡೆದು ಹಾಕಿ ಬ್ರಾಕೇಟ್ ಒಳಗಡೆ ರಸ್ತೆ ಎಂಬುದಾಗಿ ನಮೂದು ಮಾಡಲಾಗಿದೆ ಎಂದರೆ ಸರಿ. ನಿಡಿ.8 ರ ಗ್ರಾಮ ನಕಾಶೆಯಲ್ಲಿ ಊರು ಮತ್ತು ಅನ್ಯಕ್ರಾಂತವಾಗಿರುವ ಪ್ರದೇಶವನ್ನು ಹೊರತು ಪಡಿಸಿ ಉಳಿದ ಎಲ್ಲಾ ಸರ್ವೆ ನಂಬರಿನ ಜಮೀನುಗಳು ಮತ್ತು ಗೋಮಾಳ ಜಮೀನು ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸರ್ವೆ ನಂಬರು ಜಮೀನುಗಳಲ್ಲಿ ಕಟ್ಟಡವನ್ನು ನಿರ್ಮಿಸಿದರೆ ಅದನ್ನು ನಮ್ಮ ಪಂಚಾಯಿತಿ ವ್ಯಾಪ್ತಿಗೆ ಸೇರಿಸಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ನಂಬರಿನ ಜಮೀನುಗಳಲ್ಲಿ

ನಿರ್ಮಿಸಿರುವ ಕಟ್ಟಡಕ್ಕೆ ಮೂಲ ಸೌಕರ್ಯಗಳನ್ನು ಪಡೆದುಕೊಂಡಿದ್ದರೆ ಮಾತ್ರ ತೆರಿಗೆಯನ್ನು ವಸೂಲಿ ಮಾಡುವ ಸಲುವಾಗಿ ಮಾತ್ರ ಅಂತ ಸ್ವತ್ತನ್ನು ನಮ್ಮ ಪಂಚಾಯಿತಿ ವ್ಯಾಪ್ತಿಗೆ ಸೇರಿಸಿಕೊಳ್ಳುತ್ತೆವೆ ಎಂದರೆ ಸರಿ.

7. ನಿಪಿ.08 ರ ಗ್ರಾಮ ನಕಾಶೆಯಲ್ಲಿ ದುರಸ್ತಿಯಾಗಿರದ ಹಿಡುವಳಿ ಜಮೀನು ಅಲ್ಲದ ಖಾಲಿ ಇರುವ ಜಮೀನುಗಳೆಲ್ಲಾವು ಗೋಮಾಳ ಜಮೀನುಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂತಹ ಗೋಮಾಳ ಜಮೀನುಗಳು ನಮ್ಮ ಪಂಚಾಯಿತಿ ವ್ಯಾಪ್ತಿಗೆ ಬರುವುದಿಲ್ಲ, ಸಾಕ್ಷಿಯು ಮುಂದುವರೆದು ಗ್ರಾಮತಾಣಾ ಜಾಗವು ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿ ಮತ್ತೆ ಮುಂದುವರೆದು ಗೋಮಾಳ ಜಾಗದಲ್ಲಿ ಮನೆಯನ್ನು ನಿರ್ಮಿಸಿ ಭೂ ಕಂದಾಯ ಅಧಿನಿಯಮ ಕಲಂ.94 ಸಿ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಹಕ್ಕು ಪತ್ರವನ್ನು ಪಡೆದಿದ್ದರೆ ಅಂತಹ ಪ್ರದೇಶವನ್ನು ನಮ್ಮ ಪಂಚಾಯಿತಿ ಅಧಿಕಾರ ವ್ಯಾಪ್ತಿಗೆ ಸೇರಿಸಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ.

8. ನಿಪಿ.8 ಗ್ರಾಮ ನಕಾಶೆಯಲ್ಲಿ ನಮೂದು ಇರುವ ಸರ್ವೆ ನಂಬರು 17 ಮತ್ತು 18 ರ ಪೂರ್ವ , ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಖಾಲಿ ಇರುವ ಪ್ರದೇಶವು ಪಂಚಾಯಿತಿ ವ್ಯಾಪ್ತಿಗೆ ಸೇರುತ್ತದೆಯೋ ಅಥವ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ಗ್ರಾಮಾತಾಣಾ ಪ್ರದೇಶವಾಗಿದ್ದರೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರು 17 ಮತ್ತು 18 ರ ನಾಲ್ಕು ದಿಕ್ಕುಗಳಲ್ಲಿರುವ ಸ್ವತ್ತುಗಳು ಗ್ರಾಮಾತಾಣಾ ವ್ಯಾಪ್ತಿಗೆ ಒಳಪಟ್ಟಿದೆ ಎಂದು ತೋರಿಸುವ ಯಾವುದಾದರು ಅಧಿಕೃತವಾಗಿ ಘೋಷಣೆಯಾಗಿರುವ ದಾಖಲೆಗಳು ತಮ್ಮ ಇಲಾಖೆಯಲ್ಲಿ ಇರುತ್ತವೆಯೇ ಎಂಬು ಪ್ರಶ್ನೆಗೆ ಸಾಕ್ಷಿಯು ದಾವಾ ಎ ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದ ಅಸೆಸ್ ಮೆಂಟ್ ಮತ್ತು ಕ್ರಯ ಪತ್ರದಲ್ಲಿ ದಾವಾ ಎ ಷೆಡ್ಯೂಲ್ ಸ್ವತ್ತಿನ ಉತ್ತರಕ್ಕೆ ಗ್ರಾಮಾತಾಣಾ ಎಂದು ನಮೂದು ಇರುವುದಾಗಿ ನುಡಿಯುತ್ತಾರೆ.

9. ಗ್ರಾಮಾತಾಣಾ ವ್ಯಾಪ್ತಿಗೆ ಸ್ವತ್ತು ಬರುತ್ತದೆ ಎಂದು ಕಂಡು ಬಂದರೆ ಆಗ ನಮ್ಮ ಇಲಾಖೆಯಿಂದಲೇ ನೇರವಾಗಿ 11 ಎ ಖಾತೆಯನ್ನು ನೀಡುತ್ತೇವೆ, ಒಂದು ವೇಳೆ ಸ್ವತ್ತು ಗ್ರಾಮಾತಾಣಾ ವ್ಯಾಪ್ತಿಗೆ ಬರುತ್ತದೆಯೋ ಅಥವಾ ಸರ್ವೆ ನಂಬರು ವ್ಯಾಪ್ತಿಗೆ ಬರುತ್ತದೆಯೇ ಇಲ್ಲವೋ ಎಂದು ಗೊಂದಲ ಇದ್ದಾಗ ಕಂದಾಯ ಇಲಾಖೆಯಿಂದ ಆ ಬಗ್ಗೆ ವರಧಿಯನ್ನು ಪಡೆದು ಅನಂತರ 11 ಎ ಅಥವಾ 11 ಬಿ ಖಾತೆಯನ್ನು ವಿತರಿಸುತ್ತೇವೆ.

10. ದಾವಾ ಎ ಷೆಡ್ಯೂಲ್ ಸ್ವತ್ತಿನ ಮೂಲ ಸರ್ವೆ ನಂಬರು 17/2 ಆಗಿರುತ್ತದೆ. ದಾವಾ ಎ ಷೆಡ್ಯೂಲ್ ಸ್ವತ್ತಿನ ಉತ್ತರಕ್ಕೆ ಇರುವ ಸ್ವತ್ತು ಗೋಮಾಳ ಸರ್ವೆ ನಂಬರಿನ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಗ್ರಾಮಾತಾಣಾ ಸ್ವತ್ತು ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಎ ಷೆಡ್ಯೂಲ್ ಸ್ವತ್ತಿನ ಕ್ರಯ ಪತ್ರ ಮತ್ತು ಅಸೆಸ್ ಮೆಂಟ್ ಆಧಾರದ ಮೇಲೆ ದಾವಾ ಎ ಷೆಡ್ಯೂಲ್ ಸ್ವತ್ತಿನ ಉತ್ತರಕ್ಕೆ ಗ್ರಾಮಾತಾಣಾ ಸ್ವತ್ತು ಇರುವುದಾಗಿ ಹೇಳುತ್ತಿದ್ದೇನೆ.

11. ನ್ಯಾಯಾಲಯದಲ್ಲಿ ದಾವೆಯು ಬಾಕಿ ಇದ್ದುದರಿಂದ ದಾವಾ ಎ ಷಡ್ಯೂಲ್ ಸ್ವತ್ತಿನ ಉತ್ತರಕ್ಕೆ ಇರುವ ಸ್ವತ್ತು ಗ್ರಾಮತಾಣಾ ಸ್ವತ್ತೋ ಸರ್ವೆ ಜಮೀನಿನ ಸ್ವತೋ ಎಂದು ತಿಳಿಯಲು ದಿಶಾಂಕ ತಂತ್ರಾಂಶದ ಮುಖಾಂತರ ಅಳತೆ ಮಾಡುವ ಪ್ರಯತ್ನವನ್ನು ಮಾಡಿರುವುದಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ